# ವಿಡಿಐಟಿ ವಿದ್ಯಾರ್ಥಿಗಳಿಂದ ವಾಲ್‌ಚಂದ್ ಇಂಡಸ್ಟ್ರೀಸ್‌ಗೆ ಭೇಟಿ



**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳು ಇತ್ತೀಚೆಗೆ ಧಾರವಾಡದ ವಾಲ್‌ಚಂದ್ ಇಂಡಸ್ಟ್ರೀಸ್ ಗೆ ಭೇಟಿ ನೀಡಿದ್ದರು.

ವಿದ್ಯಾರ್ಥಿಗಳ ಈ ಭೇಟಿ ಸಂದರ್ಭದಲ್ಲಿ ವಾಲ್ ಚಂದ್ ಸಂಸ್ಥೆಯ ಓಂಕಾರ್ ಮತ್ತು ನಾಗಸಂಪಿಗೆ ತಮ್ಮ ಸಂಸ್ಥೆಯಲ್ಲಿ ತಯಾರಿಸುವ ಒತ್ತಡ ಮತ್ತು ಉಷ್ಣತೆ ಅಳೆಯುವ ಮಾಪಕದ ಕುರಿತು ವಿವರಣೆ ನೀಡಿದರು. ವಾಲ್ ಚಂದ್ ಸಂಸ್ಥೆಯ ಉಪಕರಣಗಳು ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಕೈಗೊಂಡಿದ್ದ ಚಂದ್ರಯಾನದಲ್ಲಿ ಬಳಕೆಯಾಗಿದೆ ಎಂದರು.

ಒತ್ತಡ ಮತ್ತು ಉಷ್ಣತೆ ಅಳೆಯುವ ಸಾಧನದ ತಯಾರಿಕೆಯ ನಂತರ ಅವುಗಳ ಸಾಮರ್ಥ್ಯವನ್ನು ಅಳೆಯುವ ವಿಧಾನವನ್ನು ವಿವರಿಸಿದರು. ಮಹಾವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಡಾ. ಸಮೀರ್ ಗಲಗಲಿ ಅವರೊಂದಿಗೆ 50ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರೆಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.